**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 191/2019**

ಸಿ.ಡಬ್ಲು-010
ಪಿ.ಡಬ್ಲು-02

| | | |
|---|---|---|
| ಹೆಸರು | ಃ | ಡಾಃ ಇರಫಾನ ಅಲೀ |
| ತಂದೆಃಗಂಡ | ಃ | ಮೈಹಿಮೂದ |
| ವಯಸ್ಸು | ಃ | 57 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿಗಳು ಸಿ.ಎಚ್.ಸಿ ನಿಂಬರ್ಗಾ |
| ವಾಸಸ್ಥಳ | ಃ | ನಿಂಬರ್ಗಾ |

ದಿನಾಂಕಃ 18.09.2025
ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ದಿನಾಂಕ 11-09-2018 ರಂದು ಸಾಯಂಕಾಲ 7.30 ಕ್ಕೆ ಚಾಸಾ 1 ರವರು ಹಲ್ಲೆಯ ಹಿನ್ನಲೆಯ ಮೇಲೆ ಆಸ್ಪತ್ರೆಗೆ ಬಂದಿದ್ದರು. ಅವರನ್ನು ಪರೀಕ್ಷಿಸಿ ನೋಡಿದಾಗ ಎಡಗೈ ಉಂಗುರದ ಬೆರಳಿಗೆ ಹರಿತವಾದ ಗಾಯ 2*1 ಸೆ.ಮೀ ಕಂಡು ಬಂದಿತ್ತು. ಅವರನ್ನು ಹೆಚ್ಚಿನ ಚಗಾಗಿ ಕಲಬುರಗಿಯ ಜಿಲ್ಲಾ ಆಸ್ಪತ್ರೆಗೆ ರೇಫರ್ ಮಾಡಲಾಯಿತು. ನಂತರ ದಿಃ 13-09-2018 ರಂದು ಅವರು ಎಕ್ಸರೆ ವರದಿಯ ನಂಬರ 1426 ನ್ನು ತೆಗೆದುಕೊಂಡು ಬಂದಿದ್ದು ಅದನ್ನು ಪರೀಕ್ಷಿಸಿ ನೋಡಿದಾಗ ಯಾವುದೇ ಪ್ಯಾಕ್ಚರ ಕಂಡು ಬಂದಿರುವುದಿಲ್ಲ. ನನ್ನ ಪ್ರಕಾರ ಸದರಿ ಗಾಯ ಸಾದಾ ಸ್ವರೂಪದ ಗಾಯ ಇರುತ್ತದೆ ಅಂತಾ ಪ್ರಮಾಣ ಪತ್ರ ನೀಡಿರುತ್ತೇನೆ.

ಸಾಕ್ಷಿಯು ಅವರು ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಬಿ.ಎ.ಡಿ ವಕೀಲರರಿಂದ.**

ಚಾಸಾ 1 ರವರ ಎಡಗೈ ಉಂಗುರದ ಬೆರಳು ಸಂಪೂರ್ಣವಾಗಿ ಕತ್ತರಿಸಿರಲಿಲ್ಲ. ಚೂಪಾದ ಕಲ್ಲಿಗೆ ಬೆರಳನ್ನು ತಿವಿದಾಗ ಮೇಲೆ ತಿಳಿಸಿದ ರೀತಿ ಗಾಯ ಆಗಬಹುದು ಎಂದರೆ ಸರಿ. ನಾನು ವಿನಃ ಕಾರಣ ಚಾಸಾ 1 ರವರನ್ನು ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ- ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ.ಸಿ. ಆಳಂದ.